ಕರ್ನಾಟಕ ಸರ್ಕಾರ

ಡಿಸೆಂಬರ್ 24, 2016

# ಕ್ರಿಸ್‌ಮಸ್ ಹಬ್ಬ : ರಾಜ್ಯದ ಜನತೆಗೆ ಮುಖ್ಯಮಂತ್ರಿ ಶುಭಾಶಯ




ಬೆಂಗಳೂರು, ಡಿಸೆಂಬರ್ 24:

ಕ್ರಿಸ್‌ಮಸ್ ಹಬ್ಬದ ಸುಸಂದರ್ಭದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ರಾಜ್ಯದ ಜನತೆಗೆ, ವಿಶೇಷವಾಗಿ ಕ್ರೈಸ್ತ ಬಾಂಧವರಿಗೆ, ಶುಭ ಹಾರೈಸಿದ್ದಾರೆ.

ಕೇವಲ ಪ್ರೀತಿಯ ಸ್ವರೂಪ ಮಾತ್ರವಲ್ಲ, ಪ್ರೇಮದ ಪರ್ವತವೇ ಆಗಿದ್ದ ಏಸುಕ್ರಿಸ್ತನ ಜನ್ಮ ದಿನಾಚರಣೆಯ ಸವಿ ನೆನಪಿನಲ್ಲಿ ಆಚರಿಸುವ ಕ್ರಿಸ್‌ಮಸ್ ಹಬ್ಬವು ಮಕ್ಕಳ ಹಬ್ಬವಾಗಿಯೂ ರೂಪುಗೊಳ್ಳುತ್ತಿದೆ. ಮನೆ ಮನೆಗಳಲ್ಲಿ ಕಾಣಸಿಗುವ ಕ್ರಿಸ್‌ಮಸ್ ವೃಕ್ಷಗಳು ಪರಿಸರದ ಮೇಲಿನ ಪ್ರೀತಿಯನ್ನು ವೃದ್ಧಿಸುತ್ತದೆ. ಕ್ರಿಸ್‌ಮಸ್ ಹಬ್ಬದ ಸಂದರ್ಭದಲ್ಲಿ ಮನೆ ಹಾಗೂ ವೃಕ್ಷಗಳ ಮೇಲಿನ ದೀಪಾಲಂಕಾರಗಳು ಬದುಕಿನಲ್ಲಿ ಬೆಳಕನ್ನು ಮೂಡಿಸುವ ಸಂಕೇತವಾಗಿದೆ. ಮನೆ ಮನೆಗೆ ಶಾಂತಾಕ್ಲಾಸ್‌ನ ವೇಷಧಾರಿಯಾಗಿ ಆಗಮಿಸಿ ಮಕ್ಕಳಿಗೆ ಕೊಡುಗೆಗಳ ಕೊಡುವ ಸಂಪ್ರದಾಯ ಹಿರಿಯರ ಮತ್ತು ಕಿರಿಯರ ನಡುವಿನ ಬಾಂಧವ್ಯವನ್ನು ಬೆಸೆಯುವಂತಹುದಾಗಿದೆ. ವಿವಿಧ ಶೈಲಿಯ ಹಾಗೂ ವಿವಿಧ ಗಾತ್ರಗಳ ವರ್ಣಮಯ ಕೇಕ್‌ಗಳನ್ನು ಸವಿಯುವ ಭಾಗ್ಯ ಕ್ರೈಸ್ತ ಬಾಂಧವರಿಗೆ ಮಾತ್ರವಲ್ಲದೆ, ಎಲ್ಲರಿಗೂ ಲಭಿಸುತ್ತಿರುವುದು ಕ್ರಿಸ್‌ಮಸ್ ಹಬ್ಬವು ಒಂದು ಜಾತ್ಯಾತೀತ ಆಚರಣೆಯಾಗಿ ಪರಿವರ್ತಿತವಾಗುತ್ತಿದೆ ಎಂದು ಸಿದ್ದರಾಮಯ್ಯ ಅವರು ಬಣ್ಣಿಸಿದ್ದಾರೆ.

ಎಲ್ಲಾ ಧರ್ಮಗಳ ಎಲ್ಲಾ ಹಬ್ಬಗಳೂ ಹಾಗೂ ಎಲ್ಲಾ ಆಚರಣೆಗಳೂ ನಮ್ಮೆಲ್ಲರನ್ನೂ ಜಾತ್ಯಾತೀತ ನೆಲೆಗಟ್ಟಿನಲ್ಲಿ ಒಂದುಗೂಡಿಸಿ, ಭಾರತೀಯರನ್ನಾಗಿ ರೂಪಿಸಿ, ವಿಶ್ವ ಮಾನವರನ್ನಾಗಿ ಬೆಳೆದು ಬೆಳಗಲು ಪ್ರೇರಣೆ ಹಾಗೂ ಸ್ಫೂರ್ತಿಯನ್ನು ನೀಡಲಿ ಎಂದು ಮುಖ್ಯಮಂತ್ರಿ ತಮ್ಮ ಸಂದೇಶದಲ್ಲಿ ತಿಳಿಸಿದ್ದಾರೆ.

**************